ಸಿ.ಸಿ.ನಂ.51/2015

ಚಾಸಾ.2/ಪ್ರಾ.ಸಾ.1

ದಿನಾಂಕ:15.05.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ಅವರಿಂದಃ**

ನನ್ನ ತಂದೆಯಾದ ಚಾಸಾ-1 ರವರ ಸಹಿಯನ್ನು 1 ನೇ ಆರೋಪಿಯು ಫೋರ್ಜರಿ ಮಾಡಿ ರೂ.1,41,000/-ಗಳನ್ನು ಕಡೂರು ಟೌನ್ ಕೋ-ಆಪರೇಟೀವ್

ಸೊಸೈಟಿಯಲ್ಲಿ ಸಾಲ ಪಡೆದಿರುತ್ತಾರೆ. ನನ್ನ ತಂದೆಯಾದ ಮಲ್ಲಪ್ಪ, ನನ್ನ ಮಗನಾದ ಸಿ.ಆರ್.ವರುಣ್ ರವರನ್ನು ನಾನು ಪ್ರತಿನಿಧಿಸಿ, ನನ್ನ ಎರಡನೆಯ ಅಣ್ಣನ ಮಗನಾದ ಸಿ.ಎಂ. ಹೇಮಂತ್ ರವರನ್ನು ಅವರ ತಾಯಿ ಪ್ರತಿನಿಧಿಸಿ ಖಾಸಗೀ ದೂರನ್ನು ನೀಡಲಾಗಿತ್ತು. ಸದರಿ ಖಾಸಗೀ ದೂರಿನಲ್ಲಿ ನನ್ನ ಸಹಿಗಳು ಇರುತ್ತವೆ. ಸದರಿ ಖಾಸಗೀ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿರುವ ತಮ್ಮ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು, 1(ಬಿ), 1(ಸಿ), 1(ಡಿ) ಮತ್ತು 1(ಇ) ಮತ್ತು ನಿಪಿ-1(ಎಫ್) ಎಂದು ಗುರುತಿಸಲಾಯಿತು. ಖಾಸಗೀ ದೂರಿನಲ್ಲಿ ನನ್ನ ತಂದೆಯ ಸಹಿ ಇರುತ್ತದೆ.

ನ್ಯಾಯಾಲಯದ ಮುಂದಿರುವ ಆರೋಪಿತರೇ ಮೀಟರ್ ಬೋರ್ಡ್ ನಲ್ಲಿದ್ದ ನನ್ನ ತಂದೆಯವರ ಹೆಸರನ್ನು ಬದಲಾಯಿಸಿಕೊಂಡಿರುತ್ತಾರೆ ಹಾಗೂ ನ್ಯಾಯಾಲಯದ ಮುಂದಿರುವ 1ನೇ ಆರೋಪಿಯೇ ಕಡೂರು ಟೌನ್ ಕೋ-ಆಪರೇಟೀವ್ ಸೊಸೈಟಿಯಲ್ಲಿ ಸಹಿಯನ್ನು ಪೋರ್ಜರಿ ಮಾಡಿ ಸಾಲ ಪಡೆದಿರುತ್ತಾರೆ.

**ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು